ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಜೀವಿಶಾಸ್ತ್ರ ಮತ್ತು ಪರಿಸರ ರಾಜ್ಯ ಸಚಿವರು).

೧) ಐದು

೧) ರಾಣೆಬೆನ್ನೂರು ೨) ಬನಹಟ್ಟಿ,

೩) ರಾಮದುರ್ಗ ೪) ಗುಲ್ಬರ್ಗ

೫) ಇಲ್‌ಕಲ್.

೨) ರೂ. ೬೭.೫೫ ಲಕ್ಷಗಳು ಮೌಲ್ಯದ ನೂಲನ್ನು ವಿತರಿಸಲಾಗಿದೆ.

೩) ಹೌದು.

| | | |
|---|---|---|
| 80 ಕೌಂಟ್‌ಗಳು- | ರೂ. | 1,10,794.00 |
| 40 ಕೌಂಟ್‌ಗಳು- | ರೂ. | 5,51,011.00 |
| 60 ಕೌಂಟ್‌ಗಳು- | ರೂ. | 8,18,180.00 |
| 80 ಕೌಂಟ್‌ಗಳು- | ರೂ. | 59,976.00 |

೪) ಹೌದು.

೫) ಕೇಂದ್ರಗಳ ಮೂಲಕ ವಿತರಿಸುವ ಮೂಲಿನ ಪ್ರಮಾಣಕ್ಕೆ ಯಾವುದೇ ಮಿತಿಯನ್ನು ವಿಧಿಸಿರುವುದಿಲ್ಲ. ಸಹಕಾರ ಸಂಘಗಳ ಬೇಡಿಕೆಯನ್ನು ಪೂರೈಸುವುದಕ್ಕೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

**ಕೊಳಚೆ ಪ್ರದೇಶಗಳ ನಿರ್ಮೂಲನೆ ಕುರಿತು.**

೧೧೪೪೮-ಶ್ರೀ ಮಂಜುನಾಥ ಸಿ. ಕುನ್ನೂರ, (ಶಿಗ್ಗಾಂವ ಕ್ಷೇತ್ರ), ಮಾನ್ಯ ನಗರಾಭಿವೃದ್ಧಿ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

*೧) ಧಾರವಾಡ ಜಿಲ್ಲೆಯಲ್ಲಿ ಸರ್ಕಾರ ಗುರ್ತಿಸಿರುವ ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು?*

*೨) ಶಿಗ್ಗಾಂವ-ಸವಣೂರು ತಾಲ್ಲೂಕುಗಳಲ್ಲಿ ಗುರುತಿಸಲಾಗಿರುವ ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು?*

*೩) ಇಲ್ಲಿಯವರೆವಿಗೆ ಕೊಳಚೆ ಪ್ರದೇಶಗಳಿಗೆ ವೆಚ್ಚವಾದ ಹಣವೆಷ್ಟು*

*೪) ಈ ವರ್ಷದಲ್ಲಿ ಯಾವುದಾದರೂ ಹೊಸ ಕೊಳಚೆ ಪ್ರದೇಶಗಳನ್ನು ಗುರುತಿಸಲಾಗಿದೆಯೇ?*

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು).

೧) ೧೪೪೮.

೨) ಶಿಗ್ಗಾಂವ ತಾಲ್ಲೂಕಿನಲ್ಲಿ ಒಟ್ಟು ೮ ಕೊಳಚೆ ಪ್ರದೇಶಗಳನ್ನು ಮತ್ತು ಸವಣೂರು ತಾಲ್ಲೂಕಿನಲ್ಲಿ ಒಟ್ಟು ೭ ಕೊಳಚೆ ಪ್ರದೇಶಗಳನ್ನು ಸದರಿ ಪುರಸಭೆಗಳು ಗುರುತಿಸಿವೆ.

೩) ಇದುವರೆಗೆ ಶಿಗ್ಗಾಂವ ಪುರಸಭೆಯ ವ್ಯಾಪ್ತಿಯಲ್ಲಿ ೫ ಕೊಳಚೆ ಪ್ರದೇಶಗಳು ಘೋಷಿತವಾಗಿದ್ದು, ಒಟ್ಟು ರೂ. ೩.೩೨ ಲಕ್ಷಗಳನ್ನು ಮೂಲಭೂತ ಸೌಕರ್ಯಗಳಿಗಾಗಿ ವೆಚ್ಚ ಮಾಡಲಾಗಿದೆ ಮತ್ತು ಸವಣೂರು ಪುರಸಭೆಯ ವ್ಯಾಪ್ತಿಯಲ್ಲಿ ೪ ಕೊಳಚೆ ಪ್ರದೇಶಗಳು ಘೋಷಿತವಾಗಿದ್ದು ಒಟ್ಟು ೯.೦೬ ಲಕ್ಷಗಳನ್ನು ಮೂಲಭೂತ ಸೌಕರ್ಯಗಳಿಗಾಗಿ ವೆಚ್ಚ ಮಾಡಲಾಗಿರುವುದು.

೪) ಇಲ್ಲ.

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕುರಿತು.**

೯೭೩. ಡಾ. ಎ.ಬಿ.ಮಲಕರೆಡ್ಡಿ (ಯಾದಗಿರಿ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಕೇಂದ್ರ ಸರ್ಕಾರದಿಂದ ಮಂಜೂರಾತಿ ಪಡೆದಿರುವ ಯೋಜನೆಗಳೆಷ್ಟು?*

*ಆ) ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಕೋರಿರುವ ಯೋಜನೆಗಳೆಷ್ಟು? (ಯೋಜನೆಗಳ ಹೆಸರು ಮತ್ತು ವಿವರಗಳನ್ನೊದಗಿಸುವುದು)*

*ಇ) ಈ ಯೋಜನೆಗಳ ವೆಚ್ಚವೆಷ್ಟು?*

ಶ್ರೀಮತಿ ಬಿ.ಟಿ. ಲಲಿತಾನಾಯಕ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಲ್ಯಾಣ ಸಚಿವರು)

ಅ) ನಾಲ್ಕು

ಆ) ಒಂದು-ಗ್ರಾಮೀಣ ಮಹಿಳೆಯರ ಆರ್ಥಿಕ ಅಭಿವೃದ್ಧಿಮತ್ತು ಸ್ವಾವಲಂಬನೆ ಯೋಜನೆ-ಈ ಯೋಜನೆಯಲ್ಲಿ ಕೇಂದ್ರ ಸರ್ಕಾರವು ಚಿತ್ರದುರ್ಗ, ಕೋಲಾರ ಮತ್ತು ಬಳ್ಳಾರಿಜಿಲ್ಲೆಗಳನ್ನು ಆಯ್ಕೆ ಮಾಡಿದ್ದು, ಈ ಪ್ರಯೋಜನವನ್ನು ಪಡೆಯಲಿದ್ದಾರೆ. ಈ ಯೋಜನೆಯಲ್ಲಿ ಭೂ ಅಭಿವೃದ್ಧಿ, ಕೃಷಿ ಚಟುವಟಿಕೆ, ಕೃಷಿಗೆ ಪೂರಕವಾದ ಚಟುವಟಿಕೆಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿರುತ್ತದೆ. ಈಯೋಜನೆಯನ್ನು ೭ ವರ್ಷಗಳಲ್ಲಿ ಜಾರಿಗೊಳಿಸಲು ಉದ್ದೇಶಿಸಿದ್ದು ಯೋಜನೆಯ ೨೫ರಷ್ಟು ಹಣವನ್ನು ಐಫ್ಯಾಡ್ ಸಂಸ್ಥೆಯಿಂದ ಸಾಲದ ರೂಪದಲ್ಲಿಯೂ ಮತ್ತು ೧೫ರಷ್ಟು ಹಣವು ಸ್ಥಳೀಯವಾಗಿ ಹಣಕಾಸು ಸಂಸ್ಥೆಗಳಿಂದ ಬ್ಯಾಂಕುಗಳಿಂದ, ರಾಜ್ಯ ಸರ್ಕಾರದ ಮತ್ತು ಇತರ ಮೂಲಗಳಿಂದ ಪಡೆಯುವ ಸ್ವರೂಪದಲ್ಲಿ ಇರುತ್ತದೆ.

ಇ) ಈ ಯೋಜನೆಯ ಅಂದಾಜು ವೆಚ್ಚ ೩೫ ಕೋಟಿ ರೂಪಾಯಿಗಳು. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಬಗ್ಗೆ.